



ಹೂವುಗಳ ಅದ್ಭುತ ಲೋಕದ ಸೌಂದರ್ಯ ಸವಿಯುತ್ತ ಆ ಪರ್ವತ ಪ್ರದೇಶದ ಇತರೆ ಜೀವವೈವಿಧ್ಯವನ್ನು ಕಣ್ತುಂಬಿಕೊಳ್ಳುವ ಅವಕಾಶ.

ಸಮುದ್ರ ಮಟ್ಟದಿಂದ 3600 ಮೀಟರ್ ಎತ್ತರದಲ್ಲಿರುವ ಹೂ ಕಣಿವೆಯಲ್ಲಿ ಬೂದುಮಂಗ, ಹಾರುವ ದೊಡ್ಡಳಿಲು, ಕಪ್ಪು ಜಿಂಕೆ, ಕೆಂಪು ನರಿ, ನಿಂಬೆ ಬಣ್ಣದ ಚಿಟ್ಟೆ ಅಧಿಕ ಸಂಖ್ಯೆಯಲ್ಲಿವೆ. ನೀಲಿ ಬಣ್ಣದ ಕುರಿ, ಕಸ್ತೂರಿ ಮೃಗ, ಹಿಮಾಲಯದ ಕಪ್ಪು ಕರಡಿ, ಹಿಮ ಚಿರತೆಗಳ ಆವಾಸದಲ್ಲಿ ಪ್ರತಿಕ್ಷಣಕ್ಕೂ ಒಂದಿಲ್ಲೊಂದು ಪ್ರಾಣಿ ಕಣ್ಣಿಗೆ ಬೀಳುತ್ತದೆ. ದುರ್ಗಮ ಚಾರಣದ ಹಾದಿಯ ಭಯ—ಆಯಾಸ ಕಳೆಯುವಂತೆ ಹಿಮಾಲಯನ್ ಮೊನಲ್ ಹಕ್ಕಿಯ ಇಂಪಾದ ಆಲಾಪ ದೇಹ ಮನಸ್ಸುಗಳಿಗೆ ಮುದ ನೀಡುತ್ತದೆ. ಅಲ್ಲಿನ ವಾತಾವರಣಕ್ಕೆ ಹೊಂದುವ ಇನ್ನೂ ಅನೇಕ ಅಪರೂಪದ ಪಕ್ಷಿ ಪ್ರಭೇದಗಳು ಕಣಿವೆಯಲ್ಲಿ ನೆಲೆಗೊಂಡಿವೆ. ಕಣಿವೆಯ ರಮಣೀಯ ಸೌಂದರ್ಯ ಸವಿಯಲು ಮತ್ತು ಆಸುಪಾಸಿನಲ್ಲಿರುವ ಪ್ರಮುಖ ಸಾಮಾಜಿಕ ಧಾರ್ಮಿಕ ಪ್ರಾಮುಖ್ಯ ಗಳಿಸಿರುವ ಅನೇಕ ತಾಣಗಳಿಗೆ ಪ್ರವಾಸಿಗರನ್ನು ಕರೆದೊಯ್ಯಲು ಮಾರ್ಗದರ್ಶಿಗಳು ಸಿಗುತ್ತಾರೆ.

ಚಾರಣದ ಹಾದಿಯಲ್ಲಿ ಸಿಖ್ಖರ ಧರ್ಮಗುರು ಗುರು ಗೋವಿಂದ್ ಸಿಂಗ್‌ರ ಸ್ಮರಣಾರ್ಥ ನಿರ್ಮಾಣಗೊಂಡಿರುವ ಹೇಮಕುಂಡ್ ಸಾಹಿಬ್ ದರ್ಶನ ಪಡೆಯಬಹುದು. ಅಲ್ಲಿಗೆ ಚಾರಣ ಮಾಡುವುದು ತುಸು ಆಯಾಸದಾಯಕವಾದರೂ, ತಲುಪಿದ ಮೇಲೆ ಗೋಚರಿಸುವ ಸ್ಫಟಿಕದ ಶಿಲೆಯಷ್ಟು ಶುದ್ಧ ನೀರಿನ ಸರೋವರದ ಅಪ್ರತಿಮ ಚೆಲುವು ದಣಿವನ್ನು ಮರೆಸಿಬಿಡುತ್ತದೆ. ಏಳು ಹಿಮಚ್ಛಾದಿತ ಬೆಟ್ಟಗಳಿಂದ ಸುತ್ತುವರೆದಿರುವ ರಮಣೀಯ ಸೌಂದರ್ಯದ ತಾಣವಿದು.

ಈ ಹೂವಿನ ಕಣಿವೆಯ ಸೌಂದರ್ಯದಲ್ಲಿ ಮಿಂದೇಳಬಯಸುವವರು ಉತ್ತರಾಖಂಡ ರಾಜ್ಯದ ಪ್ರವಾಸೋದ್ಯಮ ಇಲಾಖೆಯ ಜಾಲತಾಣದಲ್ಲಿ ಹುಡುಕಾಡಿ ಅಲ್ಲಿನ ಹವಾಗುಣ ಮತ್ತು ಚಾರಣಕ್ಕೆ ಬೇಕಾಗುವ ತಯಾರಿ ಹಾಗೂ ಅನುಮತಿ ಪಡೆದುಕೊಳ್ಳುವ ಬಗ್ಗೆ ವಿವರವಾಗಿ ತಿಳಿದುಕೊಂಡಿರಬೇಕು. ಚಾರಣದ ಪ್ರಾರಂಭದ ತಾಣ ಪುಲನ್ ಹಳ್ಳಿಗೆ ಬಾಡಿಗೆ ಅಥವಾ ಸ್ವಂತ ವಾಹನದಲ್ಲಿ ತಲುಪಬಹುದು. ಈ ಹಳ್ಳಿಯು ಹತ್ತಿರದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಹೃಷಿಕೇಶ ರೈಲು ನಿಲ್ದಾಣದಿಂದ 263 ಕಿ.ಮೀ. ದೂರದಲ್ಲಿದೆ.

1931ರಲ್ಲಿ ಆಕಸ್ಮಿಕವಾಗಿ ದಾರಿ ತಪ್ಪಿಸಿಕೊಂಡ ಬ್ರಿಟಿಷ್ ಪರ್ವತಾರೋಹಿಗಳಾದ ಫ್ರಾಂಕ್ ಸ್ಮಿತಿ ಮತ್ತು ಸಂಗಡಿಗರು ಈ ಸುಂದರ ಕಣಿವೆಗೆ 'ಹೂವಿನ ಕಣಿವೆ' ಎಂದು ಹೆಸರಿಟ್ಟಿದ್ದರು. ಹಿಮಾಲಯದ ಭಾಗವಾಗಿರುವ ನಂದಾದೇವಿ ಬಯೋಸ್ಫಿಯರ್ ರಿಸರ್ವ್ (ಜೀವಗೋಳ ಮೀಸಲು) ಅರಣ್ಯದಲ್ಲಿರುವ ಈ ಕಣಿವೆಯು ಡೆಹರಾಡೂನ್‌ನಿಂದ 310 ಕಿ.ಮೀ. ದೂರ ಇದೆ. ಎತ್ತರದ ಕಣಿವೆಯ ತಪ್ಪಲಿನ ಘಂಗರಿಯ ಎಂಬ ಇನ್ನೊಂದು ಹಳ್ಳಿ ಹೇಮಕುಂಡ್ ಸಾಹಿಬ್‌ನಿಂದ ಕೇವಲ 6 ಕಿ.ಮೀ. ದೂರದಲ್ಲಿದೆ. ಇಲ್ಲೊಂದು ಹೆಲಿಪ್ಯಾಡ್ ಇದ್ದು ಕಣಿವೆಯನ್ನು ಹೆಲಿಕ್ಯಾಪ್ಟರ್‌ನಲ್ಲಿ ಕೂತು ನೋಡ ಬಯಸುವ ಅವಕಾಶವೂ ಇದೆ.

**ಪ್ರತಿಕ್ರಿಯಿಸಿ: feedback@sudha.co.in**

## ಲಾಸ್ಟ್ ಪಂಚ್

ಚಾರಣಕ್ಕಾಗಿ ಬೆಟ್ಟ ಪ್ರದೇಶಗಳಿಗೆ ಹೋಗುವ ನಾವು ಅಲ್ಲಿನ ಸೌಂದರ್ಯ ಸವಿಯುವುದರ ಜೊತೆಗೆ ಕೆಲವು ಜವಾಬ್ದಾರಿಗಳನ್ನು ನಿರ್ವಹಿಸಬೇಕಿದೆ. ಅಲ್ಲಿನ ಪರಿಸರದಲ್ಲಿ ಕಸ ಹಾಕದೆ, ಪ್ಲಾಸ್ಟಿಕ್ ಎಸೆಯದೆ, ಶಬ್ದ, ಬೆಳಕಿನ ಮಾಲಿನ್ಯ ಉಂಟು ಮಾಡದೆ, ಪ್ರಾಣಿ ಪಕ್ಷಿಗಳಿಗೆ ತೊಂದರೆ ಕೊಡದೆ ಜವಾಬ್ದಾರಿಯುತ ನಾಗರಿಕರಂತೆ ವರ್ತಿಸಬೇಕಿದೆ. ಪರ್ವತ ಪ್ರದೇಶಗಳು ನಮ್ಮನ್ನು ಕೈಬೀಸಿ ಕರೆಯುತ್ತಿಲ್ಲ ಎಂಬುದನ್ನು ನಾವು ಮರೆಯವಾರದು. ಅಲ್ಲಿ ಹೇರಳವಾಗಿರುವ ಮಂಗಗಳಿಗೆ ಆಹಾರ ನೀಡದಿರುವುದು ಅಲ್ಲಿನ ಪ್ರಕೃತಿಗೆ ಮಾಡುವ ದೊಡ್ಡ ಉಪಕಾರ. ತಿಳಿದೋ ತಿಳಿಯದೆಯೋ ನಾವು ಚೆಲ್ಲುವ ಕಸ ಜೀವವೈವಿಧ್ಯಕ್ಕೆ ಮಾರಕವಾಗುತ್ತದೆ. ಹಾಗೆ ಮಾಡಿದರೆ ನಾವೇ ಅಲ್ಲಿನ ಶುದ್ಧ ಪರಿಸರದಲ್ಲಿ ಕಸದಂತೆ ಕಾಣಿಸುತ್ತೇವೆ.